ದಿನಾಂಕ : **05.06.2018** 12 ಓಎಸ್‌ನಂ.**103/2013** ರಲ್ಲಿ

ಪಿಡಬ್ಲ್ಯೂ-**1**(ಆರ್.ಕೆ. ಸೀತಾರಾಮ್)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಲ್.ಎನ್.ಸಿ ವಕೀಲವರಿಂದಃ

**1.** ನಮ್ಮ ತಾತನ ಹೆಸರು ಗಂಜಾಂ ರಾಮಯ್ಯ. ಅವರ ಹೆಂಡತಿಯ ಹೆಸರು ನರಸಮ್ಮ ಎಂದರೆ ನಿಜ. ನನ್ನ ತಂದೆಯ ಹೆಸರು ಸಿ.ಆರ್.ಕೃಷ್ಣಯ್ಯ ಎಂದರೆ ನಿಜ. ಸಿ.ಆರ್.ಕೃಷ್ಣಯ್ಯ ಅವರಿಗೆ ಐದು ಜನ ಸಹೋದರಿಯರು ಮತ್ತು ಅವರುಗಳ ಹೆಸರು ಕ್ರಮವಾಗಿ ನಂಜಮ್ಮ, ಲಕ್ಷ್ಮಮ್ಮ, ರಾಮಕ್ಕ, ಜಯಮ್ಮ ಮತ್ತು ಶಾರದಮ್ಮ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಅವರಲ್ಲಿ ಜಯಮ್ಮ ಮಾತ್ರ ಬದುಕಿರುತ್ತಾರೆ.

**2.** ಸಿ.ಆರ್.ಕೃಷ್ಣಯ್ಯ ಅಂದರೆ ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ನಿಜ. ಸಾಕ್ಷಿಯು ಸ್ವತಃ ಮೊದಲನೇ ಹೆಂಡತಿ ತೀರಿಕೊಂಡ ನಂತರ ನನ್ನ ತಂದೆ ಎರಡನೇ ಹೆಂಡತಿಯನ್ನು ಮದುವೆಯಾಗಿದ್ದಾರೆ. ಮೊದಲನೇ ಹೆಂಡತಿ ಜಯಮ್ಮ ಅವರಿಂದ ನನ್ನ ತಂದೆಗೆ ಶಾಂತಾ ದೇವಿ, ಸೀತಾರಾಮು ಅಂದರೆ ನಾನು ಮತ್ತು ಮುರುಳೀಧರ ಮೂವರು ಮಕ್ಕಳು ಎಂದರೆ ನಿಜ. **2** ನೇ ಹೆಂಡತಿ ಸರೋಜಮ್ಮ ಅವರಿಗೆ ಸಹ ಮೂರು ಜನ ಮಕ್ಕಳು ಎಂದರೆ ನಿಜ. ಅವರುಗಳು ಪೆರಂದೇವಿ, ಆರ್.ಕೆ. ಮೋಹನ್ ರಾಮ್ ಮನ್ನಾರ್ ಮತ್ತು ಹೇಮಲತ ಎಂದರೆ ನಿಜ. ಪೆರಂದೇವಿ ತೀರಿಕೊಂಡಿದ್ದಾರೆ ಎಂದರೆ ನಿಜ. ಪೆರಂದೇವಿ ಮಗಳು ತೇಜಸ್ವಿನಿ ಎಂದರೆ ನಿಜ.

ದಿನಾಂಕ : **05.06.2018** 13 <u>ಓಎಸ್‌ನಂ.**103/2013** ರಲ್ಲಿ</u>

ಪಿಡಬ್ಲ್ಯೂ-**1**(ಆರ್.ಕೆ. ಸೀತಾರಾಮ್)

**3.** ನನ್ನ ತಂದೆ ಮತ್ತು ತಾತ ಮೂಲತಃ ಗಂಜಾಂ ನವರಾಗಿದ್ದು ನಂತರ ರಾಮನಗರದ ಪಾದರಹಳ್ಳಿಗೆ ವಲಸೇ ಬಂದರು ಎಂದರೆ ಸರಿಯಲ್ಲ. ಸಾಕ್ಷಿಯು ಸತಃ ನುಡಿಯುತ್ತಾರೆ ಮೂರು ತಲಮಾರುಗಳ ಹಿಂದಯೇ ವಲಸೇ ಬಂದಿದ್ದರು. ನಮ್ಮ ತಂದೆ ಮತ್ತು ತಾತ ಇಬ್ಬರೂ ಸೇರಿ ಪಾದರಹಳ್ಳಿಯಲ್ಲಿ ಇದ್ದ ದಾವಾ ಸ್ವತ್ತುಗಳನ್ನು ಜಂಟಿಯಾಗಿ ಕ್ರಯಕ್ಕೆ ತೆಗೆದುಕೊಂಡರು ಎಂದರೆ ಸರಿಯಲ್ಲ. ಹಾಗಾಗಿ ಅವರಿಬ್ಬರಿಗೂ ಸಮವಾದ ಹಕ್ಕು ಇತ್ತು ಎಂದರೆ ಸರಿಯಲ್ಲ.

**4.** ನಮ್ಮ ತಂದೆ ಸಿ.ಆರ್.ಕೃಷ್ಣಯ್ಯ ಬುದ್ಧಿವಂತರಾಗಿದ್ದರು ಮತ್ತು ಪತ್ರ ಬರಹಗಾರರಾಗಿದ್ದರು ಎಂದರೆ, ಗೊತ್ತಿಲ್ಲ. ನನ್ನ ತಂದೆಗೆ ಯಾವುದೇ ದುರಭ್ಯಾಸ ಇರಲಿಲ್ಲ ಎಂದರೆ ನಿಜ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಅವರ ಎರಡನೇ ಹೆಂಡತಿ ಸರೋಜಮ್ಮ ನವರಿಗೆ ದಿಃ**7-11-2012** ರಂದು ಒಂದು ದಾನ ಪತ್ರವನ್ನು ಬರೆದಿರುತ್ತಾರೆ ಎಂದರೆ ನಿಜ. ಸರ್ವೇ ಸಂಖ್ಯೆ **66** ರಲ್ಲಿ ಒಟ್ಟು **7** ಎಕರೆ **6** ಗುಂಟೆ, ಸರ್ವೇ ಸಂಖ್ಯೆ**67** ರಲ್ಲಿ **4** ಎಕರೆ **5** ಗುಂಟೆ, ಮತ್ತು ಸರ್ವೇ ಸಂಖ್ಯೆ**73** ರಲ್ಲಿ **32** ಗುಂಟೆ ಜಮೀನನ್ನು ದಾನ ಮಾಡಿರುತ್ತಾರೆ ಎಂದರೆ ನಿಜ. ಅಂದಿನಿಂದ ಜಯಮ್ಮ ನವರೇ ದಾನದ ಸ್ವತ್ತಿನ ಸಂಪೂರ್ಣ ಮಾಲೀಕರಾಗಿ ಸ್ವಾಧೀನ ಇರುತ್ತಾರೆ ಎಂದರೆ ಸುಳ್ಳು.

**3** ಮತ್ತು **4** ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ.

ದಿನಾಂಕ : **05.06.2018** 14 ಓಎಸ್‌ನಂ.**103/2013** ರಲ್ಲಿ

ಪಿಡಬ್ಲ್ಯೂ-**1**(ಆರ್.ಕೆ. ಸೀತಾರಾಮ್)

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)**

**(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)**

(ಎಂ. ಅನಿತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.